SEPTEMBER 22, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ನವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು.**

<><><>

**ಮುಖ್ಯಾಂಶಗಳು**

<><><>

- **ಆದಿಶಕ್ತಿ ಆರಾಧನೆಯ ವಿಶೇ ’ ಪರ್ವಕಾಲ; ನಾಡಿನಾದ್ಯಂತ, ಶರನ್ನವರಾತ್ರಿ ಆಚರಣೆ, ಸಂಭ್ರಮ.**
- **‘ನಾಗರಿಕ ದೇವೋ ಭವ’; ನವರಾತ್ರಿಯೊಂದಿಗೆ, ಜಿ.ಎಸ್.ಟಿ. ಉಳಿತಾಯ ಉತ್ಸವದ ಆರಂಭ – ಪ್ರಧಾನಮಂತ್ರಿ ನರೇಂದ್ರ ಮೋದಿ.**
- **‘ಫಿಟ್ ಇಂಡಿಯಾ’ ಧ್ಯೇಯದ, ನಮೋ ಯುವ ರನ್ ಮ್ಯಾರಾಥಾನ್‌ಗೆ, ವ್ಯಾಪಕ ಸ್ಪಂದನೆ.**
- **ಇಂದಿನಿಂದ, ಅಕ್ಟೋಬರ್ 7ರ ವರೆಗೆ, ರಾಜ್ಯಾದ್ಯಂತ, ಸಾಮಾಜಿಕ ಸ್ಥಿತಿಗತಿ, ಸಮೀಕ್ಷೆ.**

<><><>

**ಈಗ ವಾರ್ತೆಗಳ ವಿವರ**

<><><>

**ಶ್ರೀ ಆದಿಶಕ್ತಿ, ಮಹಾಮಾತೆಯ ಅರ್ಚನೆ, ಆರಾಧನೆಯ, ವಿಶೇ ’ ಪರ್ವಕಾಲವಾದ ಶರನ್ನವರಾತ್ರಿ ಆಚರಣೆ, ಇಂದಿನಿಂದ ನಾಡಿನಾದ್ಯಂತ ಆರಂಭವಾಗಿದೆ. ದುರ್ಗಾದೇವಿಯನ್ನು ಒಂಬತ್ತು ರೂಪಗಳಲ್ಲಿ, ಒಂಬತ್ತು ದಿನಗಳ ಕಾಲ ಪೂಜಿಸುವ ಹಬ್ಬ. ಕೆಡುಕಿನ ವಿರುದ್ಧ ಒಳಿತಿನ ವಿಜಯವನ್ನು ಸಂಕೇತಿಸುವ, ನವರಾತ್ರಿಯ 10ನೇ ದಿನ, ವಿಜಯ ದಶಮಿ ಹಬ್ಬ, ಕರ್ನಾಟಕದಲ್ಲಿ ದಸರಾ ಎಂದು, ಆಚರಿಸಲಾಗುತ್ತದೆ. ಮೈಸೂರಿನಲ್ಲಿ ಜಂಬೂ ಸವಾರಿ ಅಂದು ವಿಜೃಂಭಣೆಯಿಂದ ಜರುಗಲಿದೆ.**

<><><>

**ಉತ್ತರಪ್ರದೇಶದ ಕಾಶಿ ಜ್ಞಾನ ಪೀಠದಲ್ಲಿ, ಇಂದಿನಿಂದ ಅಕ್ಟೋಬರ್ 2ರ ವರೆಗೆ, 10 ದಿನಗಳ ಕಾಲ, ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ. ಮೂಲತಃ ಬಾಗಲಕೋಟೆ ಜಿಲ್ಲೆ, ತೋಗುಣಸಿ ಗ್ರಾಮದವರಾದ, ಕಾಶಿ ಜ್ಞಾನ ಪೀಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಪ್ರದೇಶ ಸಮಾಚಾರಕ್ಕಾಗಿ, ಶರನ್ನವರಾತ್ರಿ ಆಚರಣೆಯ ವಿಶೇಷತೆ ಕುರಿತು, ತಿಳಿಸಿದ್ದಾರೆ.**

<><><>

ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಧ್ವನಿ (45) ಸೆಕೆಂದುಗಳು

<><><>

ಐತಿಹಾಸಿಕ ಮೈಸೂರು ದಸರಾಕ್ಕೆ, ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ, ಬಾನು ಮು ್ತಾಕ್ ಅವರು, ಇಂದು ಬೆಳಗ್ಗೆ 10.10 ರಿಂದ 10.40ರ ಒಳಗೆ ಸಲ್ಲುವ, ಶುಭ ವೃಶ್ಚಿಕ ಲಗ್ನದಲ್ಲಿ, ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಗೆ ಪು ್ಪಾರ್ಚನೆ ಮಾಡಿ, ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿದಂತೆ, ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ. ಈ ಬಾರಿ, 11 ದಿನಗಳ ಕಾಲ, ದಸರಾ ಮಹೋತ್ಸವ ನಡೆಯಲಿದೆ. ಅಕ್ಟೋಬರ್ 2 ಗಾಂಧಿ ಜಯಂತಿಯಂದು, ವಿಜಯ ದಶಮಿಯ, ಜಂಬೂ ಸವಾರಿ ಜರುಗಲಿದೆ.

<><><>

ನವರಾತ್ರಿ ಹಾಗೂ ದಸರಾ ಉತ್ಸವದ ಹಿನ್ನೆಲೆ, ಮೈಸೂರು ಅರಮನೆಯಲ್ಲಿ, ಖಾಸಗಿ ದರ್ಬಾರ್‌ಗೆ ಭರದ ಸಿದ್ಧತೆಗಳು, ಪೂರ್ಣಗೊಂಡಿವೆ. ಇಂದು ಬೆಳಗ್ಗೆ 9 ಗಂಟೆ 55 ನಿಮಿಷದಿಂದ, 10 ಗಂಟೆ 15 ನಿಮಿಷದ ಒಳಗೆ, ವಾಣಿವಿಲಾಸ ಅರಮನೆಯ, ಚಾಮುಂಡಿ ತೊಟ್ಟಿಯಲ್ಲಿ, ಯದುವೀರ್ ಕೃ ್ಣದತ್ತ ಚಾಮರಾಜ ಒಡೆಯರ್ ಅವರು, ಕಂಕಣ ಧರಿಸಲಿದ್ದಾರೆ. ಬಳಿಕ, 12 ಗಂಟೆ 45 ನಿಮಿಷಕ್ಕೆ ರತ್ನ ಖಚಿತ ಸಿಂಹಾಸನವನ್ನೇರಿ, ಅವರು ಖಾಸಗಿ ದರ್ಬಾರ್ ನಡೆಸಲಿದ್ದಾರೆ.

<><><>

'ನಾಗರಿಕ ದೇವೋ ಭವ' ಮೂಲ ಮಂತ್ರದೊಂದಿಗೆ, ಇಂದಿನಿಂದ, 'ಜಿ.ಎಸ್.ಟಿ. ಬಚತ್ ಉತ್ಸವ್' ಆರಂಭವಾಗಲಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ನಿನ್ನೆ ಸಂಜೆ 5 ಗಂಟೆಗೆ, ದೇಶವಾಸಿಗಳನ್ನು ಉದ್ದೇಶಿಸಿ ಅವರು, ಮಾತನಾಡಿದರು. "ನವರಾತ್ರಿಯ ಮೊದಲ ದಿನದ, ಸುರ್ಯೋದಯದ ಜೊತೆ, ಹೊಸ ತಲೆಮಾರಿನ ಜಿ.ಎಸ್.ಟಿ. ಜಾರಿಯಾಗಲಿದೆ. ಆತ್ಮನಿರ್ಭರ ಭಾರತದತ್ತ ಇದು ದೊಡ್ಡ ಹೆಜ್ಜೆಯಾಗಲಿದೆ. ಜನರಿಗೆ ಸರಾಸರಿ ಎರಡೂವರೆ ಲಕ್ಷ ರೂಪಾಯಿ ಉಳಿತಾಯವಾಗಲಿದೆ. ಪ್ರತಿ ಮನೆಯೂ, ಪ್ರತಿ ಅಂಗಡಿಯೂ, ಸ್ವದೇಶಿ ಪ್ರತೀಕವಾಗಬೇಕು" ಎಂದು ಪ್ರಧಾನಮಂತ್ರಿ ಒತ್ತಿ ಹೇಳಿದರು.

<><><>

ಸರಕು ಮತ್ತು ಸೇವಾ ತೆರಿಗೆ, ಕೇಂದ್ರ ಮಂಡಳಿಯ, 56ನೇ ಸಭೆ ಶಿಫಾರಸಿನಂತೆ, 'ನೆಕ್ಸ್ಟ್ ಜೆನ್ ಜಿ.ಎಸ್.ಟಿ. – 2.0 ಪರಿ ್ಕೃತ ದರಗಳು, ನವರಾತ್ರಿಯ ಮೊದಲ ದಿನವಾದ ಇಂದಿನಿಂದ, ದೇಶಾದ್ಯಂತ ಜಾರಿಗೊಳ್ಳಲಿವೆ. ಗ್ರಾಹಕರು ಟೋಲ್–ಫ್ರೀ ಸಂಖ್ಯೆ 1–9–1–5 ಅಥವಾ 'ಕಾರ್ಯವಿಧಾನ್ ಇನ್ ಗ್ರಾಮ್ ಪೋರ್ಟಲ್' ಮೂಲಕ, ಹದಿನೇಳು ಭಾ ಗಗಳಲ್ಲಿ, ತಮ್ಮ ದೂರುಗಳನ್ನು ಸಲ್ಲಿಸಬಹುದು ಎಂದು, ಹಣಕಾಸು ಸಚಿವಾಲಯ ತಿಳಿಸಿದೆ.

ಈ ಕುರಿತು, ಒಂದು ವರದಿ..

*'ನೆಕ್ಸ್ಟ್ ಜೆನ್ ಜಿ.ಎಸ್.ಟಿ. – 2.0 ಪರಿ ್ಕೃತ ದರಗಳು, ನವರಾತ್ರಿಯ ಮೊದಲ ದಿನವಾದ ಇಂದಿನಿಂದ, ದೇಶಾದ್ಯಂತ ಜಾರಿಗೊಳ್ಳಲಿವೆ. 350 ಸಿ.ಸಿ. ಗಿಂತ ಕಡಿಮೆ ದಕ್ಷತೆಯ ಮೋಟಾರು ಬೈಕ್ ವಾಹನಗಳ ಮೇಲಿನ ಮೊದಲಿದ್ದ ಜಿ.ಎಸ್.ಟಿ. ತೆರಿಗೆ ಶೇಕಡ 28 ರಷ್ಟು, ಇಂದಿಗೆ ಶೇಕಡ 18ಕ್ಕೆ ಇಳಿಸಿ, ಜಾರಿ ಗೊಳಿಸಲಾಗುತ್ತಿದೆ. ಸಣ್ಣ ಕಾರುಗಳು, ಅಂದರೆ, ಸಾವಿರದ 800 ಸಿ.ಸಿ. ಗಿಂತ ಕಡಿಮೆ ದಕ್ಷತೆ ಹೊಂದಿರುವ ಕಾರುಗಳು, ಬಸ್ಸು, ಟ್ರ್ಯಾಕ್ಟರ್‌ಗಳ ಮೇಲೆ ಮೊದಲಿದ್ದ, ಜಿ.ಎಸ್.ಟಿ. ತೆರಿಗೆ ಶೇಕಡ 28 ರಿಂದ ಶೇಕಡ 18 ಕ್ಕೆ ಇಳಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹಾಗೂ ಕೇಂದ್ರದ ಹಣಕಾಸು*

*ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಶ್ರೀ ಸಾಮಾನ್ಯರ ಅನುಕೂಲಗಳನ್ನು, ಆಗುಹೋಗುಗಳನ್ನು ಗಮನದಲ್ಲಿರಿಸಿಕೊಂಡು, ಕಾಳಜಿ ಪೂರ್ವಕ, ಸರಕು ಮತ್ತು ಸೇವಾ ತೆರಿಗೆ ದರಗಳಲ್ಲಿ ಇಳಿಕೆ ಮಾಡಿದ್ದು, ಅಭಿನಂದನೀಯ. ಇನ್ನಷ್ಟು ಸುಧಾರಣೆಗಳು ಅಪೇಕ್ಷಿತ.. ಎನ್ನುತ್ತಾರೆ, ಆರ್ಥಿಕ ಮತ್ತು ಸೇವಾ ಕ್ಷೇತ್ರದ ಪರಿಣಿತರು.*

<><><>

ವಿವೇಕ ಧ್ವನಿ (48) ಸೆಕೆಂದುಗಳು

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ಅಕ್ಟೋಬರ್ 2 ಗಾಂಧಿ ಜಯಂತಿ ವರೆಗೆ ಆಯೋಜಿತ, 'ಸ್ವಚ್ಛತಾ ಹೀ ಸೇವಾ ಅಭಿಯಾನ'ಕ್ಕೆ, ಕೊಡಗು ಜಿಲ್ಲೆ, ಕೂಡ್ಲೂರು ಗ್ರಾಮದಲ್ಲಿ, ವಿದ್ಯಾರ್ಥಿಗಳು ಚಾಲನೆ ನೀಡಿ, ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸುವಂತೆ, ಗ್ರಾಮಸ್ಥರಲ್ಲಿ ಮನವಿ ಮಾಡಿದರು.

<><><>

ಗದಗ ಜಿಲ್ಲೆ, ಶಿರಹಟ್ಟಿ ತಾಲೂಕು, ಬೆಳ್ಳಟ್ಟಿ ಗ್ರಾಮದಲ್ಲಿ, ಸ್ವಚ್ಛತಾ ಹೀ ಸೇವಾ ಪಾಕ್ಷಿಕದ ಅಂಗವಾಗಿ, ಗ್ರಾಮಸ್ಥರಲ್ಲಿ, 'ಸ್ವಚ್ಛೋತ್ಸವ' ಜಾಗೃತಿ ಜಾಥಾ ಜರುಗಿತು. ಸ್ವಚ್ಛ ಭಾರತ್ ಮಿ 'ನ್, ಗ್ರಾಮೀಣ ಯೋಜನೆಯಡಿ, ಸ್ವಚ್ಛತಾ ಹೀ ಸೇವಾ ಜಾಥಾದಲ್ಲಿ, ಬೆಳ್ಳಟ್ಟಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು, ಪಾಲ್ಗೊಂಡಿದ್ದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 75ನೇ ವರ್ಷದ, ಜನ್ಮ ದಿನಾಚರಣೆ ನಿಮಿತ್ತ, ಸೇವಾ ಪಾಕ್ಷಿಕದ ಅಂಗವಾಗಿ, ಬೆಳಗಾವಿಯಲ್ಲಿ ಆಯೋಜಿಸಿದ್ದ, ನಮೋ ಯುವ ರನ್ ಮ್ಯಾರಾಥಾನ್‌ಗೆ ಶಾಸಕ ಅಭಯ ಪಾಟೀಲ, ಹಾಗೂ ಹುಬ್ಬಳ್ಳಿಯ ತೋಳನಕೆರೆಯಲ್ಲಿ, ಫಿಟ್ ಇಂಡಿಯಾ ಮತ್ತು 'ನಶೆ ಮುಕ್ತ ಭಾರತ' ಧ್ಯೇಯದ ಓಟಕ್ಕೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಿದರು. ಸಾವಿರಾರು ಸಂಖ್ಯೆಯಲ್ಲಿ ಯುವಜನ ಉಮ್ಮೇದಿಯಿಂದ ಪಾಲ್ಗೊಂಡಿದ್ದು, ವಿಶೇಷ.

<><><>

ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು, ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಸಾಧಿಸಲು, ಶ್ರಮಿಸುತ್ತಿದೆ.

ಕೈಗೆಟುಕುವ ದರದಲ್ಲಿ ವಸತಿ ಸೌಕರ್ಯ ಹಾಗೂ ನಗರ ಸಂಪರ್ಕವನ್ನು, ಕಳೆದ ಒಂದು ದಶಕದಲ್ಲಿ ಬಲಪಡಿಸಿ, ದೇಶಾದ್ಯಂತ ನಗರಗಳಲ್ಲಿ, ಜನ ಜೀವನದ ಗುಣಮಟ್ಟ ಗಮನಾರ್ಹ ಸುಧಾರಣೆ ಕಂಡಿದೆ. ಒಂದು ಕೋಟಿ, **16** ಲಕ್ಷಕ್ಕೂ ಹೆಚ್ಚು ಮನೆಗಳು ಮಂಜೂರಾಗಿವೆ. **93** ಲಕ್ಷಕ್ಕೂ ಹೆಚ್ಚು ಮನೆಗಳನ್ನು, ಕಟ್ಟಿ ಪೂರ್ಣಗೊಳಿಸಲಾಗಿದೆ. **2014** ಕ್ಕಿಂತ ಮೊದಲು, ದೇಶದಲ್ಲಿ ಕೇವಲ, **250** ಕಿಲೋ ಮೀಟರ್ ಮೆಟ್ರೋ ಸಂಪರ್ಕ ಮಾರ್ಗಗಳಿದ್ದವು. ಇಂದು, ಭಾರತದಲ್ಲಿ ಮೆಟ್ರೋ ಜಾಲ, ಸಾವಿರ ಕಿಲೋಮೀಟರ್‌ಗಳಿಗೂ ಹೆಚ್ಚು ವಿಸ್ತರಿಸಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ, ಈ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ಹೀಗೆ.....

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ – **23** ಸೆಕೆಂದುಗಳು

<><><>

ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿ ಸಮೀಕ್ಷೆಯನ್ನು, ಇಂದಿನಿಂದ ಅಕ್ಟೋಬರ್ **7**ರ ವರೆಗೆ, ರಾಜ್ಯಾದ್ಯಂತ ಆಯೋಜಿಸಿದೆ. ರಾಜ್ಯದ **31** ಜಿಲ್ಲೆಗಳ, ಎಲ್ಲ ತಾಲೂಕುಗಳಲ್ಲಿ, ಸಮೀಕ್ಷೆ ಕಾರ್ಯ ಸುಗಮವಾಗಿ ಜರುಗಲು ಅನುವಾಗುವಂತೆ ಹಾಗೂ ಸಾರ್ವಜನಿಕರ ಸಂದೇಹ, ಪ್ರಶ್ನೆಗಳಿಗೆ ತಕ್ಷಣ ಸ್ಪಂದಿಸಲು, ಸಹಾಯವಾಣಿ ಕೇಂದ್ರಗಳನ್ನು, ಆಯಾ ಜಿಲ್ಲಾಧಿಕಾರಿಗಳು ರಚಿಸಿದ್ದಾಗಿ, ತಿಳಿಸಿದ್ದಾರೆ. ಸಹಾಯವಾಣಿ ತಂಡ, ಕಚೇರಿಯ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಲಿದ್ದು, ಸಮೀಕ್ಷೆ ಬಗ್ಗೆ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ಮತ್ತು ಸಹಾಯ ಒದಗಿಸಲಿದೆ.

<><><>

ಮಂಗಳೂರಿನಲ್ಲಿ ಮಾತನಾಡಿದ, ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ್, ರಾಜ್ಯ ಸರ್ಕಾರ ನಡೆಸುತ್ತಿರುವುದು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಗಣತಿ. ಇದನ್ನು ವೈಜ್ಞಾನಿಕವಾಗಿಯೇ ನಡೆಸಲಾಗುತ್ತಿದೆ. ಇದು ಜಾತಿ ಗಣತಿ ಅಲ್ಲ. ಜಾತಿ ಗಣತಿಯನ್ನು ಕೇಂದ್ರ ಸರ್ಕಾರವೇ ನಡೆಸುತ್ತದೆ. ಹೀಗಾಗಿ ಜನತೆ ಅನಗತ್ಯ ಗೊಂದಲ ಪಡಬೇಕಾಗಿಲ್ಲ ಎಂದು, ಸ್ಪ ್ಟಪಡಿಸಿದರು.

<><><>

ಪ್ರಲ್ಹಾದ ಜೋಶಿ, ಸಿ.ಎನ್.ಅಶ್ವತ್ಥನಾರಾಯಣ, ಎನ್.ರವಿಕುಮಾರ ಸೇರಿದಂತೆ, ರಾಜ್ಯ ಬಿಜೆಪಿ ಮುಖಂಡರು, ಈ ಸಮೀಕ್ಷೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಈ ತಿಂಗಳ **28**ನೇ ತಾರೀಖು, ಕೊನೆ ಭಾನುವಾರದಂದು, ಬೆಳಗ್ಗೆ **11** ಗಂಟೆಗೆ, 'ಮನ್ ಕೀ ಬಾತ್' ನಲ್ಲಿ, ಆಕಾಶವಾಣಿ ಮೂಲಕ, ದೇಶ, ವಿದೇಶಗಳ ಭಾರತೀಯರೊಂದಿಗೆ ತಮ್ಮ ಅನಿಸಿಕೆ ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ **126**ನೇ ಆವೃತ್ತಿಯಾಗಿದೆ. ನಮೋ ಆಪ್, **My Gov.in** ಜಾಲತಾಣ, ಅಥವಾ **1800-11-7800** ಗೆ ಕರೆ ಮಾಡಿ, ಸಾರ್ವಜನಿಕರು ತಮ್ಮ ಸಲಹೆ ದಾಖಲಿಸಬಹುದು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಆದಿಶಕ್ತಿ ಆರಾಧನೆಯ ವಿಶೇ ’ ಪರ್ವಕಾಲ; ನಾಡಿನಾದ್ಯಂತ, ಶರನ್ನವರಾತ್ರಿ ಆಚರಣೆ, ಸಂಭ್ರಮ.
- ‘ನಾಗರಿಕ ದೇವೋ ಭವ’; ನವರಾತ್ರಿಯೊಂದಿಗೆ, ಜಿ.ಎಸ್.ಟಿ. ಉಳಿತಾಯ ಉತ್ಸವದ ಆರಂಭ – ಪ್ರಧಾನಮಂತ್ರಿ ನರೇಂದ್ರ ಮೋದಿ.
- ‘ಫಿಟ್ ಇಂಡಿಯಾ’ ಧ್ಯೇಯದ, ನಮೋ ಯುವ ರನ್ ಮ್ಯಾರಾಥಾನ್‌ಗೆ, ವ್ಯಾಪಕ ಸ್ಪಂದನೆ.
- ಇಂದಿನಿಂದ, ಅಕ್ಟೋಬರ್ 7ರ ವರೆಗೆ, ರಾಜ್ಯಾದ್ಯಂತ, ಸಾಮಾಜಿಕ ಸ್ಥಿತಿಗತಿ, ಸಮೀಕ್ಷೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>